ಶ್ರವಣ ಪರೀಕ್ಷೆ ಕಡ್ಡಾಯವಾಗಿ ನಡೆಯಲಿ: ಶಾಲಿನಿ ರಜನೀಶ್

# ಎನ್‌ಬಿಎಸ್ ಕೇಂದ್ರ ತೆರೆಯಲಿ

ಪ್ರಜಾವಾಣಿ ವಾರ್ತೆ



ಆಯಿಷ್ ವಾರ್ಷಿಕ ವರದಿಯನ್ನು ಶಾಲಿನಿ ರಜನೀಶ್ ಬಿಡುಗಡೆಗೊಳಿಸಿದರು. ಡಾ.ಎಂ.ಪುಷ್ಪಾವತಿ, ಪ್ರೊ.ಜಿ.ಹೇಮಂತಕುಮಾರ್, ರಿಷಬ್ ಶೆಟ್ಟಿ ಇದ್ದಾರೆ

ಮೈಸೂರು: ರಾಜ್ಯದ ಎಲ್ಲ ಆಸ್ಪತ್ರೆಗಳಲ್ಲಿ ನವಜಾತ ಶಿಶುವಿನ ಶ್ರವಣ ಪರೀಕ್ಷಾ ಕೇಂದ್ರಗಳನ್ನು (ಎನ್‌ಬಿಎಸ್) ತೆರೆಯಲು ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆಗೆ (ಆಯಿಷ್) ಎಲ್ಲ ಸಹಕಾರ ನೀಡಲಾಗುವುದು ಎಂದು ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆಯ ಪ್ರಧಾನ ಕಾರ್ಯದರ್ಶಿ ಶಾಲಿನಿ ರಜನೀಶ್ ಭರವಸೆ ನೀಡಿದರು.

ಅಯಿಷ್ ಸಂಸ್ಥೆಯಲ್ಲಿ ಶುಕ್ರವಾರ ಆಯೋಜಿಸಿದ್ದ ವಾರ್ಷಿಕೋತ್ಸವದಲ್ಲಿ ಅವರು ಮಾತನಾಡಿದರು.

ಆಯಿಷ್‌ನಂತಹ ಸಂಸ್ಥೆ ಮೈಸೂರಿನಲ್ಲಿದ್ದರೂ, ರಾಜ್ಯದಲ್ಲಿರುವ ಆಸ್ಪತ್ರೆಗಳಲ್ಲಿ ಶ್ರವಣ ಪರೀಕ್ಷೆ ಕೇಂದ್ರ ತೆರೆಯಲು ಸಾಧ್ಯವಾಗಿಲ್ಲ. ಎಲ್ಲ ಆಸ್ಪತ್ರೆಗಳಲ್ಲಿ ಇಂತಹ ಕೇಂದ್ರ ಆರಂಭಿಸಬೇಕು ಎಂದರು.

ಎನ್‌ಬಿಎಸ್ ಕೇಂದ್ರ ಆರಂಭಿಸಲು ಆಸ್ಪತ್ರೆಗಳು 2 ಕೊಠಡಿ ನೀಡಿದರೆ ಸಾಕು. ಎಲ್ಲ ಸಲಕರಣೆ, ತಜ್ಞರು ಮತ್ತು ವೈದ್ಯರನ್ನು ಒದಗಿಸಿಕೊಡುವುದಾಗಿ ಅಯಿಷ್ ಹೇಳಿದೆ. ಆದರೂ ಆಸ್ಪತ್ರೆಗಳು ಮುಂದೆ ಬರುತ್ತಿಲ್ಲ. ಸಂಸ್ಥೆಯ ಕೊಡುಗೆಯನ್ನು ಎಲ್ಲ ಆಸ್ಪತ್ರೆಗಳು ಬಳಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ನವಜಾತ ಶಿಶುಗಳನ್ನು ಶ್ರವಣ ಪರೀಕ್ಷೆಗೆ ಒಳಪಡಿಸಿದರೆ, ಶ್ರವಣ ಸಮಸ್ಯೆ ಇದೆಯೇ ಎಂಬುದು ತಿಳಿಯಬಹುದು. ದೋಷವನ್ನು ಆರಂಭದಲ್ಲೇ ಪತ್ತೆ ಮಾಡಿ ಸೂಕ್ತ ಚಿಕಿತ್ಸೆ ನೀಡಬಹುದು. ಎಳೆಯದರಲ್ಲೇ ಶ್ರವಣದೋಷ ಪತ್ತೆ ಮಾಡದೆ ಇದ್ದರೆ ಆ ಮಕ್ಕಳು ಮುಂದೆ ಸಮಸ್ಯೆ ಎದುರಿಸುವರು ಎಂದರು.

**ಅಭಿವೃದ್ಧಿಯ ವೇಗ ಹೆಚ್ಚಲಿ:** 'ನಾನು ಕೆಲವು ಸಮಯಗಳಿಂದ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆಯನ್ನು ನಿರ್ವಹಿಸುತ್ತಾ ಬಂದಿದ್ದೇನೆ. ಬಡತನ ನಿರ್ಮೂಲನೆ, ಎಲ್ಲರಿಗೂ ಆರೋಗ್ಯ ಮತ್ತು ಶಿಕ್ಷಣ ದೊರೆಯಬೇಕು ಎಂಬುದು ವಿಶ್ವಸಂಸ್ಥೆಯ ಸುಸ್ಥಿರ ಅಭಿವೃದ್ಧಿ ಗುರಿಗಳಾಗಿವೆ. ಇದಕ್ಕೆ ಎಲ್ಲರೂ ಕೈಜೋಡಿಸಬೇಕು ಎಂದರು.

2018-19ರ ಸಾಲಿನಲ್ಲಿ ಉತ್ತಮ ಸಾಧನೆ ತೋರಿದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ಆಯಿಷ್ ಸ್ಮರಣ ಸಂಚಿಕೆಯನ್ನು ಶಾಲಿನಿ ರಜನೀಶ್ ಬಿಡುಗಡೆಗೊಳಿಸಿದರು.

ಆಯಿಷ್ ನಿರ್ದೇಶಕಿ ಡಾ.ಎಂ. ಪುಷ್ಪಾವತಿ ಅಧ್ಯಕ್ಷತೆ ವಹಿಸಿದ್ದರು. ನಟ ರಿಷಬ್ ಶೆಟ್ಟಿ, ಮೈಸೂರು ವಿ.ವಿ. ಕುಲಪತಿ ಪ್ರೊ.ಜಿ.ಹೇಮಂತಕುಮಾರ್, ಸಹಾಯಕ ಪ್ರಾಧ್ಯಾಪಕಿ ಡಾ.ಕೆ. ಯಶೋಧಾ ಪಾಲ್ಗೊಂಡಿದ್ದರು.

## ಮೂರು ಕೇಂದ್ರಗಳ ಉದ್ಘಾಟನೆ

ಆಯಿಷ್ ಸಹಯೋಗದೊಂದಿಗೆ ದೇಶದ 3 ಆಸ್ಪತ್ರೆಗಳಲ್ಲಿ ಆರಂಭಿಸಲಾದ ನವಜಾತ ಶಿಶುವಿನ ಶ್ರವಣ ಪರೀಕ್ಷಾ ಕೇಂದ್ರಗಳನ್ನು ಶುಕ್ರವಾರ ಉದ್ಘಾಟಿಸಲಾಯಿತು. ನವದೆಹಲಿಯ ರಾಮಮನೋಹರ್ ಲೋಹಿಯಾ ಆಸ್ಪತ್ರೆ, ಮುಂಬೈನ ಎಐಐಪಿಎಂಆರ್, ಶಿಮ್ಲಾದ ಇಂದಿರಾಗಾಂಧಿ ವೈದ್ಯಕೀಯ ಕಾಲೇಜಿನಲ್ಲಿ ಎನ್‌ಬಿಎಸ್ ಕೇಂದ್ರಗಳು ಆರಂಭವಾಗಿವೆ.

# 54th Annual Day celebrations of AIISH tomorrow

Mysuru, Aug. 8- All India Institute of Speech and Hearing (AIISH), Mysuru, established in 1965, for human resource development, research, clinical services and public education in the field of communication disorders, will be celebrating its 54th anniversary on Aug.9.

On the invitation of Government of India, Dr. Martin F. Palmer, Director, Institute of Logopedics, Wichita, Kansas, USA, visited India in 1963 and recommended for setting up an Institute of Logopedics in India at Mysore. On Aug.9, 1965, All India Institute of Logopedics started functioning in Rama Mandira (a rented building) with **Dr. B.M. Rao** as the first Director.

On July 25, 1966, **Dr. S. Radhakrishnan,** the then President of India, laid the foundation stone of the Institute building and on Oct.10, 1966, the Institute was registered as an autonomous Institute under the Society Registration Act with the name "All India Institute of Speech and Hearing."

Over the years, the Institute has blossomed into one of the premier establishments across South Asia in the field of communication disorders.

The 54th Annual Day celebrations will be held tomorrow at 10.30 am at AIISH Seminar Hall, Knowledge Park, Naimisham Campus, Manasagangothri. **Dr. Shalini Rajneesh,** Principal Secretary, Department of Planning, Programming, Monitoring and Statistics, Bengaluru, **Prof. G. Hemantha Kumar,** Vice-Chancellor, University of Mysore and **Rishab Shetty,** Film Director and Actor, will be the chief guests. Dr. M. Pushpavathi, Director, AIISH, will preside.

**Dr. Mysore Manjunath,** internationally renowned violinist and **Prashanth,** Cine Actor, will be the guests for cultural programme at 6.30 pm on the same day at AIISH Gymkhana Auditorium, Panchavati Campus.

On the occasion, inaugurations of NBS Centres and releases of Annual Report and Dissertation-based articles will be done. Retired employees, employees who completed 25 years of service, Ph.D awardees, meritorious students will be felicitated and AIISHian of the Year Award will be presented during the valedictory.

USED MATERIALS FOR SALE
- Gypsum false ceiling with channels
- Lift (5 Passangers)
- Cupboards & Racks

KAUTILYA VIDYALAYA, MYSORE
Affiliated to CBSE, New Delhi
Call : 0821-2460266 (From 9am to 5pm)




# ಶ್ರವಣ ಪರೀಕ್ಷಾ ಕೇಂದ್ರ ಆರಂಭಿಸಿ

■ ವಿಜಯವಾಣಿ ಸುದ್ದಿಜಾಲ ಮೈಸೂರು

ರಾಜ್ಯದ ಎಲ್ಲ ಆಸ್ಪತ್ರೆಗಳಲ್ಲೂ ನವಜಾತ ಶಿಶುವಿನ ಶ್ರವಣ ಪರೀಕ್ಷಾ ಕೇಂದ್ರವನ್ನು (ಎನ್‌ಬಿಎಸ್) ಪ್ರಾರಂಭಿಸಬೇಕು ಎಂದು ಸಾಂಖ್ಯಿಕ ಇಲಾಖೆಯ ಪ್ರಧಾನ ಕಾರ್ಯದರ್ಶಿ ಶಾಲಿನಿ ರಜನೀಶ್ ಹೇಳಿದರು.

» ಸಾಂಖ್ಯಿಕ ಇಲಾಖೆ ಪ್ರಧಾನ ಕಾರ್ಯದರ್ಶಿ ಶಾಲಿನಿ ರಜನೀಶ್ ಸಲಹೆ

ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆ(ಆಯಿಷ್)ಯಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ವಾರ್ಷಿಕೋತ್ಸವದಲ್ಲಿ ಮಾತನಾಡಿದರು.

ವಾಕ್ ಮತ್ತು ಶ್ರವಣ ವೈದ್ಯಕೀಯ ಕ್ಷೇತ್ರದಲ್ಲಿ ಆಯಿಷ್ ದೇಶ-ವಿದೇಶದಲ್ಲಿ ಹೆಸರು ಮಾಡಿದೆ. ಆದರೆ, ಇಂತಹ ಬೃಹತ್ ಸಂಸ್ಥೆ ಮೈಸೂರಿನಲ್ಲಿದ್ದರೂ, ರಾಜ್ಯದ ಆಸ್ಪತ್ರೆ ಗಳಲ್ಲಿ ಶ್ರವಣ ಪರೀಕ್ಷೆ ಕೇಂದ್ರವನ್ನು ಸ್ಥಾಪಿಸಲು ಸಾಧ್ಯವಾಗಿಲ್ಲ ಎಂದರು.

ಎನ್‌ಬಿಎಸ್ ಕೇಂದ್ರ ಆರಂಭಿಸಲು ಕೇವಲ ಎರಡು ಕೊಠಡಿ ಸಾಕು. ಇದಕ್ಕೆ ಸಂಬಂಧಿಸಿದ ಸಲಕರಣೆಗಳು, ತಜ್ಞರು, ವೈದ್ಯರನ್ನು ಒದಗಿಸಲು ಆಯಿಷ್ ಕೂಡ ಉತ್ಸುಕವಾಗಿದೆ. ಇದನ್ನು ಸದ್ಬಳಕೆ ಮಾಡಿಕೊಳ್ಳಲು ಯಾವುದೇ ಆಸ್ಪತ್ರೆಗಳು ಮುಂದೆ ಬರುತ್ತಿಲ್ಲ ಎಂದು ಕಳವಳ ವ್ಯಕ್ತಪಡಿಸಿದರು. ಆಯಿಷ್ ನಿರ್ದೇಶಕಿ ಡಾ.ಎಂ.ಪುಷ್ಪಾವತಿ ಮಾತನಾಡಿ, ಆಯಿಷ್ ಸಹಯೋಗದೊಂದಿಗೆ ದೇಶದ ಮೂರು ಆಸ್ಪತ್ರೆಗಳಲ್ಲಿ ಆರಂಭಿಸಿದ ನವಜಾತ ಶಿಶುವಿನ ಶ್ರವಣ ಪರೀಕ್ಷೆ ಕೇಂದ್ರವನ್ನು ಶುಕ್ರವಾರ ಲೋಕಾರ್ಪಣೆಗೊಳಿಸಲಾಗಿದೆ. ನವದೆಹಲಿಯ ರಾಮಮನೋಹರ್ ಲೋಹಿಯಾ ಆಸ್ಪತ್ರೆ, ಮುಂಬೈನ ಎಐಐಪಿಎಂಆರ್, ಶಿಮ್ಲಾದ ಇಂದಿರಾಗಾಂಧಿ ವೈದ್ಯಕೀಯ ಕಾಲೇಜಿನಲ್ಲಿ ನೂತನವಾಗಿ ಈ ಕೇಂದ್ರ ಆರಂಭಿಸಲಾಗಿದೆ ಎಂದರು. ಈ ವೇಳೆ ಆಯಿಷ್‌ನ ವಾರ್ಷಿಕ ವರದಿ ಬಿಡುಗಡೆಗೊಳಿಸ ಲಾಯಿತು. 2018-19ನೇ ಸಾಲಿನಲ್ಲಿ ಸಾಧನೆ ಮಾಡಿದ ವಿದ್ಯಾರ್ಥಿಗಳನ್ನು ಅಭಿನಂದಿಸಲಾಯಿತು. ಮೈಸೂರು ವಿ.ವಿ.ಕುಲಪತಿ ಪ್ರೊ.ಜಿ.ಹೇಮಂತ ಕುಮಾರ್, ನಟ ರಿಷಬ್ ಶೆಟ್ಟಿ, ಸಹಾಯಕ ಪ್ರಾಧ್ಯಾಪಕಿ ಡಾ.ಕೆ.ಯಶೋದಾ ಇದ್ದರು.




ನಗರದ ಆಯಿಷ್‌ನಲ್ಲಿ ಶುಕ್ರವಾರ ಆಯೋಜಿಸಿದ್ದ ವಾರ್ಷಿಕೋತ್ಸವವನ್ನು ಸಾಂಖ್ಯಿಕ ಇಲಾಖೆ ಪ್ರಧಾನ ಕಾರ್ಯದರ್ಶಿ ಶಾಲಿನಿ ರಜನೀಶ್ ಉದ್ಘಾಟಿಸಿದರು.ಡಾ.ಎಂ.ಪುಷ್ಪಾವತಿ, ಪ್ರೊ.ಜಿ.ಹೇಮಂತಕುಮಾರ್, ರಿಷಬ್ ಶೆಟ್ಟಿ, ಡಾ.ಕೆ.ಯಶೋದಾ ಇದ್ದರು.

# All govt hosps to get centres for newborns

## Facility Will Help Screen Communication Disorders Early, Says Principal Secretary

TIMES NEWS NETWORK



TOI

**INSTANT UPGRADE:** Principal secretary, planning, programming, monitoring and statistics, Shalini Rajneesh inaugurates Newborn Screening Centres at various hospitals in the country through Skype from Mysuru

**Mysuru:** The state government will set up 'newborn screening centres' in all government hospitals to eradicate communication disorders in children, said Shalini Rajneesh, principal secretary, planning, programming, monitoring and statistics, on Friday.

Speaking after inaugurating the 54th Annual Day celebrations of All India Institute of Speech and Hearing at its auditorium here on Friday, she said: "Though we have All India Institute of Speech and Hearing in Mysuru, we do not have a single Newborn Screening Centre in any of our hospitals. This facility is being made use of by other states. To set up this centre, director Dr Pushpavathi has requested me to provide two rooms in the hospital. Other things like equipment worth Rs 50 lakh and experts would be provided by AIISH. Hence, in days to come, we will take a decision in this regard and see that such facilities are provided in all hospitals in the state so that not even a single child suffer from any disability. If we do not avail this opportunity, it will be our misfortune."

She also mentioned that simple aides will be given to anganawadis and also to schools.

Dr Pushpavathi, director of AIISH, told TOI: "The hospitals who want to have communication disorders screening centre should sign a memorandum of understanding with us for five years. For five years, we will provide our manpower and equipment worth Rs 80 lakh. Later, after five years, the respective hospitals need to manage the centre by themselves. The equipment at each centre costs nearly Rs 50 lakh. If such centres are set up in all the hospitals, it will really help to eradicate communication problems among children." She also said that there was no shortage for funds as they got sufficient money from centre.

On the occasion, Shalini Rajneesh inaugurated Newborn Screening Centres at Dr Ram Manohar Lohia Hospital and PGIMER in New Delhi, at All India Institute of Physical Medicine and Rehabilitation in Mumbai and at Indira Gandhi Medical College, Shimla through skype. Now, with the inauguration of these three centres at three different states, AIISH has extended to 12 states. Later, she also released the annual report of AIISH.

G Hemantha Kumar, vice-chancellor, University of Mysore felicitated PhD awardees and released dissertation-based articles. He also assured all help, including technical, for AIISH.

Not only meritorious students, but retired and outstanding employees including Group D staff were also felicitated.

Rishab Shetty, cine director and actor, was present.